ದಿನಾಂಕಃ **16.12.2023** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 1, 2, 4** ರಿಂದ **8** ನೇ ಪ್ರತಿವಾದಿಗಳ ಪರ ಶ್ರೀ ಬಿ.ಎಂ.ಎಂ.ಎಸ್. ಶಿವಕೀಲರಿಂದಃ-

9 ನೇ ಪ್ರತಿವಾದಿ ಬೆಂಡಿಗೇರಿ ಫಕ್ಕಿರವ್ವರವರಿಗೂ ನಮ್ಮ ಕುಟುಂಬಕ್ಕೂ ಯಾವ ಕಡೆಯಿಂದಲೂ ಮತ್ತು ಯಾವ ರೀತಿಯಿಂದಲೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳಿಗೆ ಮಾಹಿತಿ ಇಲ್ಲದಂತೆ 9 ನೇ ಪ್ರತಿವಾದಿಯು ದಾವಾ ಸ್ವತ್ತುಗಳಿಗೆ ಸಂಬಂಧಿಸಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎನ್ನುವುದು ಸರಿ. ಕಂದಾಯ ಇಲಾಖೆಯಿಂದ ಸದರಿ ಖಾತೆಗೆ ಸಂಬಂಧಿಸಿ ನಮಗೆ ಯಾವುದೇ ನೋಟೀಸ್ ಜಾರಿಯಾಗಿಲ್ಲ. ಪಹಣಿಯಲ್ಲಿ ಆಕೆಯ ಹಸೆರು ನಮೂದು ಆದ ಬಗ್ಗೆ ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳಿಗೆ ಯಾವುದೇ ಮಾಹಿತಿ ತಿಳಿದಿಲ್ಲ. ನಾವು ವಾದಿಗಳು ಮತ್ತು 1 ರಿಂದ 8 ನೇ ಪ್ರತಿವಾದಿಗಳು 9 ನೇ ಪ್ರತಿವಾದಿಗೆ ಏಕೆ ಹೀಗೆ ಮೋಸ ಮಾಡಿದ್ದಿರಿ ಎಂದು ಕೇಳಿದ್ದೇವೆ ಆದರೆ ಆಕೆ ಯಾವುದೇ ಸೂಕ್ತ ಉತ್ತರ ನೀಡಿಲ್ಲ ಎಂದರೆ ಸರಿ. 9 ನೇ ಪ್ರತಿವಾದಿಯು ನಾನು ಖಾತೆ ಮಾಡಿಸಿಕೊಂಡಿರುವುದು ನಿಜ ಆದರೆ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಡುತ್ತೇನೆ ಎಂದು ನಮಗೆ ತಿಳಿಸಿದ್ದರು. 1 ರಿಂದ 8 ನೇ ಪ್ರತಿವಾದಿಗಳ ಸಮಕ್ಷಮ ತಿಳಿಸಿರಬಹುದು ನಮಗೆ ಹೇಳಿಲ್ಲ ಎಂದು ತಿಳಿಸಿದ್ದಾರೆ.

ಪ್ರಸ್ತುತ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಭಾಗಾಂಶ ಬೇಕೆಂದು ದಾವೆ ಸಲ್ಲಿಸಿದ್ದೇವೆ. ದಾವೆ ಸಲ್ಲಿಸುವ ಸಮಯಕ್ಕೆ ದಾವಾ ಸ್ವತ್ತಿನ ಪಹಣಿಗಳು ಯಾರ ಹೆಸರಿನಲ್ಲಿದ್ದವು ಎಂದು ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ದೊಡ್ಡಭರಮಪ್ಪರವರ ಮಕ್ಕಳು ಎನ್ನುವುದು ಸರಿ. ಇಡ್ಲಿ ಹನುಮಂತಪ್ಪರವರ ಮಗ ನಿಂಗಪ್ಪ ನನಗೆ ದೊಡ್ಡಪ್ಪ ಎನ್ನುವುದು ಸರಿ. ನನ್ನ ದೊಡ್ಡಮ್ಮನ ಹೆಸರು ಇಡ್ಲಿ ದೊಡ್ಡನಿಂಗಮ್ಮ ಎಂದರೆ ಸರಿ. ಪ್ರತಿವಾದಿ 5 ರಿಂದ 8 ನಮ್ಮ ದೊಡ್ಡಮ್ಮನ ಮಕ್ಕಳು ಎನ್ನುವುದು ಸರಿ. ನಮ್ಮ ಭಾಗಕ್ಕೆ ಬಂದ 2 ಎಕರೆ ಸ್ವತ್ತಿಗೆ ಸಂಬಧಿಸಿ 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ನಾವು ವಾಸಿಸುತ್ತಿರುವ ಮನೆಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ಪ್ರಸ್ತುತ ಅದು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ 3 ಮತ್ತು 4 ನೇ ಸ್ವತ್ತುಗಳಲ್ಲಿ 4 ಎಕರೆ 85 ಸೆಂಟ್ಸ್ ಸ್ವತ್ತು 1 ರಿಂದ 3 ನೇ ಪ್ರತಿವಾದಿಗಳ ಭಾಗಕ್ಕೆ ಬಂದಿತ್ತು ಎಂದರೆ ಸದರಿ ಪಾಲುಪಟ್ಟಿಯ ವಿಚಾರ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ನನ್ನ ದೊಡ್ಡಪ್ಪ ನಿಂಗಪ್ಪರವರಿಗೆ ದಾವಾ ಶೆಡ್ಯೂಲ್ 3 ಮತ್ತು 4 ನೇ ಸ್ವತ್ತುಗಳಲ್ಲಿ 6.85 ಎಕರೆ ಸ್ವತ್ತು ಸದರಿ ವಿಭಾಗದಲ್ಲಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನಿಗೆ 6 ನೇ ಶೆಡ್ಯೂಲ್ ಸ್ವತ್ತಿನಲ್ಲಿ 16 x 32 ಅಡಿಗಳ ಸ್ವತ್ತು ಅದೇ ವಿಭಾಗದಲ್ಲಿ ಬಂದಿದೆ ಎಂದರೆ ಸಾಕ್ಷಿಯು ವಿಸ್ತೀರ್ಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ. ದಾವಾ ಶೆಡ್ಯೂಲ್ 6 ನೇ ಸ್ವತ್ತಿನಲ್ಲಿ ನಮಗೆ 32 x 32 ಅಡಿಗಳ ಸ್ವತ್ತು ಬಂದಿದೆ ನಾವು ಅದರಲ್ಲಿ ಮನೆ ಕಟ್ಟಿಕೊಂಡು ಇದ್ದೇವೆ ಎಂದರೆ ಎಲ್ಲರೂ ಸ್ವಲ್ಪ ಸ್ವಲ್ಪ ಸ್ವತ್ತುಗಳನ್ನು ಪಡೆದುಕೊಂಡಿದ್ದೇವೆ ನಿಖರವಾದ ಮಾಹಿತಿ ಹೇಳಲಾಗುವುದಿಲ್ಲ ಎಂದು ಸಾಕ್ಷಿ ತಿಳಿಸಿದ್ದಾರೆ. 1 ರಿಂದ

3 ನೇ ಪ್ರತಿವಾದಿಗಳಿಗೂ ಸಹಾ ಅದೇ ಸ್ವತ್ತಿನಲ್ಲಿ 16 x 32 ಅಡಿಗಳ ಸ್ವತ್ತು ಬಂದಿದೆ ಎಂದರೆ ಸಾಕ್ಷಿಯು ಮೇಲಿನಂತೆ ಉತ್ತರಿಸಿದ್ದಾರೆ.

ನನ್ನ ತಾಯಿಗೆ ಸಹಿ ಮಾಡಲು ಬರುವುದಿಲ್ಲ. ಎಡಗೈ ಹೆಬ್ಬೆರಳಿನ ಗುರುತು ಹಾಕುತ್ತಾರೆ. ದಿ:13.06.2008 ರಂದು ನನ್ನ ತಾಯಿ ಮತ್ತು ಅವರ ಕುಟುಂಬದವರು ಹಾಗೂ 1 ರಿಂದ 8 ನೇ ಪ್ರತಿವಾದಿಗಳು ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ. ಸದರಿ ವಿಭಾಗ ಪತ್ರಕ್ಕೆ ನನ್ನ ತಾಯಿ ತಮ್ಮ ಎಡಗೈ ಹೆಬ್ಬೆರಳಿನ ಗುರುತು ಹಾಕಿದ್ದಾರೆ ಎಂದರೆ ಸರಿಯಲ್ಲ. 1 ರಿಂದ 3, 4 ನೇ ಪ್ರತಿವಾದಿ ಗಂಡ ಇಡ್ಲಿ ನಿಂಗಪ್ಪರವರು ತಮ್ಮ ತಮ್ಮ ಎಡಗೈ ಹೆಬ್ಬೆರಳಿನ ಗುರುತು ಹಾಕಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ಸಾಕ್ಷಿದಾರರಾಗಿ ಗೊಲ್ಲರ ಮಾರುತ್ತೆಪ್ಪ, ನಾಗರಾಜಪ್ಪ, ಚಿಂಚಲಪ್ಪರವರು ಸಹಿ ಮಾಡಿದ್ದಾರೆ ಹಾಗೂ ಗುಡ್ಡಪ್ಪ, ಇಡ್ಲಿ ಶಿವಪ್ಪರವರು ತಮ್ಮ ಎಡಗೈ ಹೆಬ್ಬೆರಳಿನ ಗುರುತು ಹಾಕಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಭಾಗ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ . ದಿ:13.06.2008 ರ ವಿಭಾಗ ಪತ್ರದ ಪ್ರಕಾರ ಅವರವರ ಪ್ರತ್ಯೇಕ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಮತ್ತು ಪಹಣಿಗಳಲ್ಲಿ ಹೆಸರು ನಮೂದು ಆಗಿದೆ ಎಂದರೆ ಸಾಕ್ಷಿಯು ಸದರಿ ವಿಚಾರ ತಿಳಿದ ನಂತರವೇ ನಾವು ಈ ದಾವೆ ಸಲ್ಲಿಸಿದ್ದೇವೆ ಎಂದು ತಿಳಿಸಿದ್ದಾರೆ. 2008 ರಿಂದ ಈ ದಾವೆ ಸಲ್ಲಿಸುವವರೆಗೂ ಮೇಲೆ ಹೇಳಿದ ಪ್ರಕಾರವೇ ಅವರವರ ಹೆಸರಿನಲ್ಲಿಯೇ ಖಾತೆ ಮತ್ತು ಪಹಣಿಗಳಿದ್ದವು, ನಾವು ನಮ್ಮ ನಮ್ಮ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟಾಗಿಯೇ ವ್ಯವಸಾಯ ಮಾಡುತ್ತಿದ್ದೆವು, ಯಾವಾಗ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. ಪ್ರಸ್ತುತ ನೀವು ಎಷ್ಟು ಎಕರೆ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಎಲ್ಲರೂ ಸೇರಿ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಈ ದಾವೆಯು ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನಾನು ಹೇಳಿದಂತೆ ನಮ್ಮ ವಕೀಲರು ಬರೆದು ಸಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ. ನಮಗೆ ಮೇಲೆ ಹೇಳಿದ ಎಲ್ಲಾ ವಿಚಾರ ತಿಳಿದಿದ್ದರೂ ಸಹಾ ಪ್ರತಿವಾದಿಗಳ ವಿರುದ್ಧ ಉದ್ದೇಶಪೂರ್ವಕವಾಗಿ ಈ ದಾವೆ ಸಲ್ಲಿಸಿ , ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ತಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳನ್ನು ತಮ್ಮ ನಡುವೆ ವಿಭಾಗಿಸಿಕೊಂಡಿದ್ದು , 3 ನೇ ಪ್ರತಿವಾದಿಯು ತಮ್ಮ ಭಾಗದ ಸ್ವತ್ತನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಬಗ್ಗೆ ನಮ್ಮ ವಕೀಲರು ಹೇಳಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ. ಮೇಲೆ ಹೇಳಿದ 2008 ನೇ ಸಾಲಿನ ವಿಭಾಗದ ಪ್ರಕಾರ ನಮ್ಮ ಕುಟುಂಬಕ್ಕೆ ಬಂದಿರುವ 2 ಎಕರೆ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಗಳು ಬಿಟ್ಟುಕೊಟ್ಟಲ್ಲಿ ನಮ್ಮ ಭಾಗ ನಮಗೆ ಬಂದಂತೆ ಆಗುತ್ತದೆ ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟಾಗಿಯೇ ವ್ಯವಸಾಯ ಮಾಡುತ್ತಿದ್ದೇವೆ, ವಿಭಾಗದ ವಿಚಾರ ಗೊತ್ತಿಲ್ಲ ಎಂದು ತಿಳಿಸಿದ್ದಾರೆ. 1 ರಿಂದ 3 ನೇ ಪ್ರತಿವಾದಿಗಳು ಸದರಿ 2 ಎಕರೆ ಸ್ವತ್ತನ್ನು ಬಿಟ್ಟುಕೊಟ್ಟಿಲ್ಲದ ಕಾರಣ ನಾವು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-**ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನ ಹಡಗಲಿ.